


## ಸ್ವಪ್ರಯತ್ನದಿಂದ ಮೇಲೆ ಬನ್ನಿ...

ಗುಂಡ ಆರನೇ ತರಗತಿಯ ವಿದ್ಯಾರ್ಥಿ. ಅವನ ಗುರುಗಳು ಪ್ರತಿದಿನ ತರಗತಿಯಲ್ಲಿ ಪಾಠ ಮಾಡುವಾಗ 'ಪ್ರತಿಯೊಬ್ಬರೂ ಸ್ವಪ್ರಯತ್ನದಿಂದ ಮೇಲೆ ಬರಬೇಕು' ಎಂದು ಹೇಳುತ್ತಿದ್ದರು. ಅಂದು ಗುಂಡ ಕೆಲಸದ ಮೇಲೆ ಮಾರುಕಟ್ಟೆಗೆ ಹೋಗುತ್ತಿದ್ದ. ಜನ ಸಂಚಾರ ವಿರಳವಾಗಿತ್ತು. ಮಾರ್ಗ ಮಧ್ಯದ ಹೊಂಡವೊಂದರಲ್ಲಿ ಯಾರೋ 'ಸಹಾಯ ಮಾಡಿ, ಕಾಪಾಡಿ' ಎಂದು ಕೂಗುತ್ತಿರುವುದು ಕೇಳಿಸಿತು. ಗುಂಡ ಹೋಗಿ ನೋಡಿದರೆ ಅವನ ಪ್ರೀತಿಯ ಗುರುಗಳು! ಕಾಲು ಜಾರಿ ಹೊಂಡದಲ್ಲಿ ಬಿದ್ದುಬಿಟ್ಟಿದ್ದರು. ಅವನನ್ನು ನೋಡಿದವರೇ ಅವರು 'ಗುಂಡ, ಬಾರಯ್ಯಾ! ದೇವರು ಬಂದಹಾಗೆ ಬಂದಿದ್ದೀಯಾ. ಮೊದಲು ನನ್ನನ್ನು ಮೇಲೆತ್ತು' ಎಂದರು. ಅದಕ್ಕೆ ಗುಂಡ 'ಇದೇನು ಗುರುಗಳೇ. ನೀವು ಪ್ರತಿದಿನ ಪಾಠ ಮಾಡುವಾಗ ಸ್ವಪ್ರಯತ್ನದಿಂದ ಮೇಲೆ ಬರಬೇಕೂಂತ ಹೇಳ್ತಾ ಇರ್ತೀರಾ. ಈಗ ನೋಡಿದರೆ ನನ್ನನ್ನು ಕರೆಯುತ್ತಿದ್ದೀರಲ್ಲಾ? ನೀವೇ ಸ್ವಪ್ರಯತ್ನದಿಂದ ಮೇಲೆ ಬನ್ನಿ...' ಎಂದವನೇ ದಾಪುಗಾಲು ಹಾಕುತ್ತಾ ಹೊರಟೇಹೋದ. ಗುರುಗಳು ಹಣೆಹಣೆ ಚಚ್ಚಿಕೊಂಡರು.

**ಎಂ.ಕೆ. ಮಂಜುನಾಥ್**



## ಕಡಿಮೆ ಅಂಕ

ನಾಲ್ಕನೇ ತರಗತಿಯ ಅಂಕಪಟ್ಟಿ ಹಿಡಿದುಕೊಂಡು ಅಪ್ಪನ ಮುಂದೆ ಬಂದು ನಿಂತ ತಿಪ್ಪೇಶಿ. ಪಡೆದ ಅಂಕಗಳನ್ನು ಕಂಡು ಸಿಟ್ಟಾದ ಅವನ ತಂದೆ, 'ಇಷ್ಟೊಂದು ಕಡಿಮೆ ಮಾರ್ಕ್ಸ್ ತಗೊಂಡಿದ್ದೀಯಲ್ಲೊ... ನಾಚಿಕೆ ಆಗಿಲ್ವಾ? ಕಪಾಳಕ್ಕೆ ಹೊಡಿಬೇಕು ಅನಿಸ್ತಿದೆ' ಎಂದು ರೇಗಿದ. ತಿಪ್ಪೇಸಿ ತಡಮಾಡದೇ ಹೇಳಿದ: 'ಹೌದು ಅಪ್ಪ, ನನಗೂ ಹಾಗೇ ಅನಿಸ್ತಿದೆ. ನಾಚಿಕೆ ಆಗಲ್ವಾ ಇಷ್ಟೊಂದು ಕಡಿಮೆ ಮಾರ್ಕ್ಸ್ ಹಾಕೊಕೆ? ಆ ಮೇಷ್ಟ್ರ ಮನೆ ನನಗೆ ಗೊತ್ತು. ನಡಿರಿ, ಹೋಗೋಣ.' ತಂದೆ ಪಕ್ಕದಲ್ಲಿದ ಕುರ್ಚಿಯಲ್ಲಿ ಕುಸಿದು ಕೂತಿದ್ದರು.

**ಪಿ. ಜಯವಂತ ಪೈ**